**ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟನಿ.,**
**ಮಾಚೇನಹಳ್ಳಿ, ನಿದಿಗೆ (ಅಂಚೆ), ಶಿವಮೊಗ್ಗ– 577 222, ☎08182–246161, 246463**
**md_shimul@yahoo.com**

---

ಐ.ಎಫ್.ಟಿ. ಸಂಖ್ಯೆ/ಶಿದಾಚಿಸಹಾಒ/ಗು.ನಿ/72/ಟೆಂಡರ್/ 2390/ 2015–16 ದಿನಾಂಕ:06/07/2015

## –: ***ದ್ವೈವಾರ್ಷಿಕ ಅವಧಿಗೆ ಪೆಸ್ಟ್ ಕಂಟ್ರೋಲ್ ಸರ್ವಿಸ್ ಒದಗಿಸಲು ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಪ್ರಕಟಣೆ:–***

ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರಿ ಹಾಲು ಒಕ್ಕೂಟದ ವ್ಯಾಪ್ತಿಯಲ್ಲಿ ಬರುವ ಶಿವಮೊಗ್ಗ ಜಿಲ್ಲೆಯ, ಶಿವಮೊಗ್ಗ ಡೇರಿ, ತಡಗಣಿ ಮತ್ತು ಆನಂದಪುರ ಹಾಲು ಶೀತಲೀಕರಣ ಕೇಂದ್ರ, ದಾವಣಗೆರೆ ಜಿಲ್ಲೆಯ ದಾವಣಗೆರೆ ಡೇರಿ ಮತ್ತು ಹೊನ್ನಾಳಿ ಹಾಲು ಶೀತಲೀಕರಣ ಕೇಂದ್ರ, ಹಾಗು ಚಿತ್ರದುರ್ಗ ಜಿಲ್ಲೆಯ ಚಿತ್ರದುರ್ಗ, ಹೊಸದುರ್ಗ, ಬಿಜಿಕೆರೆ ಹಾಲು ಶೀತಲೀಕರಣ ಕೇಂದ್ರ (ಒಟ್ಟು 02 ಡೇರಿ 06 ಶೀತ'ಲೀಕರಣ ಕೇಂದ್ರ)ಗಳಲ್ಲಿ ಇಲಿ/ಹೆಗ್ಗಣ, ಹಲ್ಲಿ ಹಾಗು ಕೀಟಗಳನ್ನು ನಿಯಂತ್ರಿಸಲು ನೊಂದಾಯಿತ ಹೆಸರಾಂತ ಕಂಪನಿಗಳಿಂದ 02 ವರ್ಷದ ಅವಧಿಗೆ ಪೆಸ್ಟ್ ಕಂಟ್ರೋಲ್ ಸರ್ವಿಸ್ ಗುತ್ತಿಗೆ ಪಡೆಯಲು ಟೆಕ್ನಿಕಲ್/ಕಮರ್ಷಿಯಲ್(ದರ) ಹೊಂದಿದ ಪ್ರತ್ಯೇಕ ಟೆಂಡರ್‌ಗಳನ್ನು ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಆಹ್ವಾನಿಸಲಾಗಿದೆ. ಟೆಂಡರ್‌ದಾರರು ರೂ. 25000/– **EMD** ಯೊಡನೆ ಟೆಂಡರ್ ದಾಖಲಾತಿಗಳನ್ನು ಜಿ.ಒ.ಕೆ. ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಫಾರಂ ಡೌನ್‌ಲೋಡ್ ಮಾಡಿಕೊಂಡು ಸಲ್ಲಿಸುವುದು.

**ವಿಳಾಸ:** **https://eproc.karnataka.gov.in**

| | | |
|---|---|---|
| 1 | **ಟೆಂಡರ್ ಡೌನ್‌ಲೋಡ್ ಮಾಡಿಕೊಳ್ಳುವ** | **ದಿನಾಂಕ: 13/07/2015 ರ ನಂತರ** |
| 2 | **ಟೆಂಡರ್ ಫಾರಂಗಳನ್ನು ಇ–ಟೆಂಡರ್ ಮೂಲಕ ಸಲ್ಲಿಸಲು ಕೊನೆಯ** | **ದಿನಾಂಕ: 7/08/2015 ರಂದು ಸಂಜೆ: 17 ಗಂಟೆಯವರೆಗೆ** |
| 3 | **ಟೆಕ್ನಿಕಲ್ ಟೆಂಡರ್ ತೆರೆಯುವ** | **ದಿನಾಂಕ: 10/08/2015 ರಂದು ಸಂಜೆ: 17 ಗಂಟೆಯ ನಂತರ** |

**ಈ ಕೆಳಗೆ ನಮೂದಿಸಿದಂತೆ ಶಿವಮೊಗ್ಗ ಡೇರಿ, ದಾವಣಗೆರೆ ಡೇರಿ ಹಾಗು ಈ ಕೆಳಕಂಡ ಹಾಲು ಶೀತಲೀಕರಣ ಕೇಂದ್ರಗಳಲ್ಲಿ, ಇಲಿ/ಹೆಗ್ಗಣ, ಹಲ್ಲಿ ಹಾಗೂ ಕೀಟಗಳನ್ನು ಸಮರ್ಪಕವಾಗಿ ನಿಯಂತ್ರಿಸಲು 02 ವರ್ಷದ ಅವಧಿಗೆ ಗುತ್ತಿಗೆ ಕರೆಯಲಾಗಿದೆ :–**

| ಕ್ರ.ಸಂ | ಕೆಲಸದ ವಿವರಗಳು | ಡೇರಿ /ಶೀತಲೀಕರಣ ಕೇಂದ್ರಗಳು | ಮಾಸಿಕ ಕನಿಷ್ಟ ಭೇಟಿಗಳು |
|---|---|---|---|
| 1 | ಜಿರಲೆ, ಇಲಿ/ಹೆಗ್ಗಣ, ಹಲ್ಲಿ, ನೊಣಗಳ ನಿಯಂತ್ರಣ ಕ್ರಮ | ಎ)**ಶಿವಮೊಗ್ಗ ಕೇಂದ್ರ** ಡೇರಿಯಎಲ್ಲಾ ವಿಭಾಗಗಳ ಮುಖ್ಯವಾಗಿ ಸಂಸ್ಕರಣ ವಿಭಾಗ, ಉತ್ಪನ್ನ ವಿಭಾಗ ಡೇರಿಯ ಹೊರ ಆವರಣ, ಪ್ರೀಪ್ಯಾಕ್ ವಿಭಾಗ, ಕೋಲ್ಡ್ ಸ್ಟೋರ್, ಡೀಪ್ ಫ್ರೀಸರ್, ಉಗ್ರಾಣ ವಿಭಾಗಗಳು, ಕಛೇರಿ ವಿಭಾಗ, ಕ್ಯಾಂಟಿನ ಮುಂತಾದವುಗಳು | ವಾರಕೊಮ್ಮೆಯಂತೆ ಕನಿಷ್ಟ ನಾಲ್ಕು ಬಾರಿ |

| ಕ್ರ.ಸಂ | ಕೆಲಸದ ವಿವರಗಳು | ಡೇರಿ /ಶೀತಲೀಕರಣ ಕೇಂದ್ರಗಳು | ಮಾಸಿಕ ಕನಿಷ್ಟ ಭೇಟಿಗಳು |
|---|---|---|---|
| 2 | ಜಿರಲೆ, ಇಲಿ/ಹೆಗ್ಗಣ, ಹಲ್ಲಿ, ನೊಣಗಳ ನಿಯಂತ್ರಣ ಕ್ರಮ | b)**ದಾವಣಗೆರೆ ಡೇರಿ**ಯ ಸಂಸ್ಕರಣ ವಿಭಾಗ, ಡೇರಿಯ ಹೊರ ಆವರಣ, ಪ್ರೀಪ್ಯಾಕ್ ವಿಭಾಗ, ಕೋಲ್ಡ್ ಸ್ಟೋರ್, ಉಗ್ರಾಣ ವಿಭಾಗ, ಕಛೇರಿ ವಿಭಾಗ, ಕ್ಯಾಂಟಿನ್ ವಿಭಾಗ ಮತ್ತು ಇತರೆ. | ವಾರಕೊಮ್ಮೆಯಂತೆ ಕನಿಷ್ಟ ನಾಲ್ಕು ಬಾರಿ |
| 3 | ಜಿರಲೆ, ಇಲಿ/ಹೆಗ್ಗಣ, ಹಲ್ಲಿ, ನೊಣಗಳ ನಿಯಂತ್ರಣ ಕ್ರಮ | c)**ಶೀತಲೀಕರಣ ಕೇಂದ್ರಗಳು:** ಚಿತ್ರದುರ್ಗ ಜಿಲ್ಲೆಯ ಚಿತ್ರದುರ್ಗ ತಾಲ್ಲುಕಿನ ಚಿತ್ರದುರ್ಗ ಶೀತಲೀಕರಣ ಕೇಂದ್ರ, ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲುಕಿನ ತಡಗಣಿ ಶೀತಲೀಕರಣ ಕೇಂದ್ರ, ಚಿತ್ರದುರ್ಗ ಜಿಲ್ಲೆಯ ಮೊಣಕಾಲ್ಮುರು ತಾಲ್ಲುಕಿನ ಬಿ.ಜಿ.ಕೆರೆ ಶೀತಲೀಕರಣ ಕೇಂದ್ರ, ದಾವಣಗೆರೆ ಜಿಲ್ಲೆಯ ಹೊನ್ನಾಳಿ ತಾಲ್ಲುಕಿನ ಹೊನ್ನಾಳಿ ಶೀತಲೀಕರಣ ಕೇಂದ್ರ, ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲುಕಿನ ಆನಂದಪುರ ಶೀತಲೀಕರಣ ಕೇಂದ್ರ, ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲ್ಲುಕಿನ ಹೊಸದುರ್ಗ ಶೀತಲೀಕರಣ ಕೇಂದ್ರಗಳ ಹಾಲು ಸ್ವೀಕರಣಾ ವಿಭಾಗ, ಪ್ರಯೋಗ ಶಾಲೆ, ಡೇರಿಯ ಹೊರ ಆವರಣ, ಉಗ್ರಾಣ ವಿಭಾಗ, ಕಚೇರಿ ವಿಭಾಗ ಇತ್ಯಾದಿ. | ಹದಿನೈದು ದಿನಕೊಮ್ಮೆಯಂತೆ ಎರಡು ಬಾರಿ |

**ನಿಬಂಧನೆ ಮತ್ತು ಷರತ್ತುಗಳು**

1. ಟೆಂಡರ್ ಅರ್ಜಿ ಸಲ್ಲಿಸ ಬಯಸುವವರು ರೂ 25000/- EMD ಯನ್ನು ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಸಲ್ಲಿಸುವುದು.
2. ಟೆಂಡರ್‌ದಾರರು ಈ ಹಿಂದೆ ಪೆಸ್ಟ್ ಕಂಟ್ರೋಲ್ ಸರ್ವಿಸ್ ನಿರ್ವಹಿಸಿದ ಕನಿಷ್ಠ ಎರಡು ಸಂಸ್ಥೆಗಳಿಂದ ದೃಢೀಕರಣ ಪತ್ರ ಪಡೆದು ಅಪ್‌ಲೋಡ್ ಮಾಡತಕ್ಕದ್ದು. ಮತ್ತು ಟೆಂಡರ್‌ದಾರರು ಎಲ್ಲಾ ತೆರಿಗೆಗಳನ್ನು ಸೇರಿಸಿ ದರ ನಮೂದಿಸತಕ್ಕದ್ದು.
3. ಟೆಂಡರ್‌ದಾರರು ಪೆಸ್ಟ್ ಕಂಟ್ರೋಲ್ ಸರ್ವಿಸ್‌ಗೆ ಕಳುಹಿಸುವ ಸಿಬ್ಬಂದಿಗಳಿಗೆ ಒಕ್ಕೂಟದಿಂದ ಯಾವುದೇ ರೀತಿಯ ವಾಹನ ವ್ಯವಸ್ಥೆ ಮಾಡಲಾಗುವುದಿಲ್ಲ.
4. ಟೆಂಡರ್‌ದಾರರು ಸಂಸ್ಥೆಯ ನೊಂದಣಿ ಪತ್ರ ಹಾಗೂ ಪೆಸ್ಟ್ ಕಂಟ್ರೋಲ್ ಸರ್ವಿಸ್‌ಗೆ (IPCA) ಪಡೆದಿರುವ ಲೈಸನ್ಸ್‌ನ ನಕಲು ಪ್ರತಿ, ಪಾನ್ ಕಾರ್ಡ್, ಮತ್ತು ಸರ್ವಿಸ್ ಟ್ಯಾಕ್ಸ್ ರಿಜಿಸ್ಟ್ರೇಷನ್ ಸರ್ಟಿಫಿಕೇಟನ್ನು ಅಪ್‌ಲೊಡ್ ಮಾಡತಕ್ಕದ್ದು.
5. ಟೆಂಡರ್‌ದಾರರು ಡೇರಿ/ಶೀತಲೀಕರಣ ಕೇಂದ್ರಗಳಲ್ಲಿ ಉಪಯೋಗಿಸುವ ಕೀಟನಾಶಕಗಳ ಹೆಸರು ಮತ್ತು ಅವುಗಳ ರಾಸಾಯನಿಕ ವಿವರಗಳ ಪಟ್ಟಿಯನ್ನು ಅಪ್‌ಲೊಡ್ ಮಾಡತಕ್ಕದ್ದು.
6. ಟೆಂಡರ್‌ದಾರರು ತಾವು ಒದಗಿಸುವ ಕನಿಷ್ಟ ಸಿಬ್ಬಂದಿಗಳ ಸಂಖ್ಯೆಯನ್ನು ನಮೂದಿಸತಕ್ಕದ್ದು.
7. ಟೆಂಡರ್‌ದಾರರು ರೂ 30000/- ಗಳ ಭದ್ರತಾ ಠೇವಣಿ ನೀಡತಕ್ಕದ್ದು.
8. ಟೆಂಡರ್ ಸಲ್ಲಿಸುವ ಟೆಂಡರ್‌ದಾರರು ಅವಶ್ಯವಿದ್ದಲ್ಲಿ ಡೇರಿ /ಶೀತಲೀಕರಣ ಕೇಂದ್ರಗಳಿಗೆ ಭೇಟಿ ನೀಡಿ ಪರಿಶೀಲಿಸಿ ದರ ನಮೂದಿಸಬಹುದಾಗಿದೆ.

9. ಎಲ್ಲಾ ಕೀಟ ನಿಯಂತ್ರಣ ಸೇವೆಯನ್ನು ಒಕ್ಕೂಟದ ಸಂಬಂದಿತ ಅಧಿಕಾರಿ/ಸಿಬ್ಬಂದಿಯ ಮೇಲ್ವಿಚಾರಣೆಯಲ್ಲಿ ಮಾಡುವುದು ಮತ್ತು ಆಯಾ ವಿಭಾಗಾಧಿಕಾರಿಯಿಂದ ಧೃಢೀಕರಣ ಪಡೆಯತಕ್ಕದ್ದು.
10. ಮಾಸಿಕ ನಿಗದಿತ ಸಂಖ್ಯೆಯ ಪ್ರಕಾರ ಭೇಟಿ ನೀಡಬೇಕು. ತಪ್ಪಿದಲ್ಲಿ ಮೊತ್ತವನ್ನು ಬಿಲ್ಲಿನಲ್ಲಿ ಕಡಿತಗೊಳಿಸಲಾಗುವುದು.
11. ಎರಡು ಸೇವೆಯ ಮಧ್ಯದಲ್ಲಿ ಯಾವುದೇ ರೀತಿಯ ಕೀಟಗಳು, ಇಲಿ/ಹೆಗ್ಗಣಗಳು, ಹಲ್ಲಿಗಳು ಕಂಡಲ್ಲಿ ಉಚಿತವಾಗಿ ಸೇವೆಯನ್ನು ನೀಡಬೇಕಾಗುತ್ತದೆ.
12. ಕೀಟನಾಶಕದಲ್ಲಿ ಉಪಯೋಗಿಸುವ ರಾಸಾಯನಿಕಗಳು ಯಾವುದೇ ರೀತಿಯ ದುರ್ವಾಸನೆಯಿಂದ ಕೂಡಿರಬಾರದು. ಸಿಂಪಡಿಸಿದ ಜಾಗದಲ್ಲಿ ಅದರ ವಾಸನೆಯು ಹಾಲಿನ ಫಿಲ್ಮಗಳೊಂದಿಗೆ, ಹಾಲು ಹಾಗೂ ಹಾಲಿನ ಉತ್ಪನ್ನಗಳೊಂದಿಗೆ ಬೆರೆಯಬಾರದು.
13. ಕೀಟನಾಶಕದಲ್ಲಿ ಉಪಯೋಗಿಸುವ ರಾಸಾಯನಿಕಗಳು ಮನುಷ್ಯನಿಗೆ ಹಾನಿಕಾರಕವಾಗಬಾರದು ಮತ್ತು ಸಿಂಪಡಿಸಿದಾಗ ಗೋಡೆ, ಕಿಟಕಿ, ಬಾಗಿಲು, ಯಂತ್ರಗಳ ಮೇಲೆ ಕಲೆಯಾಗಬಾರದು. ಬಳಸುವ ರಾಸಾಯನಿಕ ವಸ್ತುಗಳು ಆಹಾರ ಸುರಕ್ಷತೆ ಕುರಿತು ಅಧಿಕೃತ ತಜ್ಞರಿಂದ ದೃಡೀಕರಣ ಪತ್ರ ಹೊಂದಿರಬೇಕು. ಅದನ್ನೂ ಅಪ್‌ಲೊಡ್ ಮಾಡತಕ್ಕದ್ದು.
14. ಕೀಟನಾಶಕಗಳಲ್ಲಿ ಉಪಯೋಗಿಸುವ ರಾಸಾಯನಿಕ ವಸ್ತುಗಳ ಸಾಂದ್ರತೆ ಮತ್ತು ಅವುಗಳ ವಿವರ ಹಾಗೂ ಪ್ರಾಥಮಿಕ ಚಿಕಿತ್ಸೆಗಳ ವಿವರಗಳನ್ನು ನೀಡತಕ್ಕದ್ದು.
15. ಸೇವೆ ಪ್ರಾರಂಭಿಸುವ ಮುನ್ನ ಕೀಟನಾಶಕ ಬಿಲ್ಲೆಗಳನ್ನು ಇಡುವ ಸ್ಥಳಗಳನ್ನು ಗುರುತಿಸಿ ನಕ್ಷೆ ತಯಾರಿಸಿ ಕಚೇರಿಗೆ ನೀಡತಕ್ಕದ್ದು ಹಾಗೂ ವಿಭಾಗಾಧಿಕಾರಿಗಳು ತಿಳಿಸುವ ಸ್ಥಳಗಳಲ್ಲಿ ಕೀಟನಾಶಕಗಳನ್ನು ಸಿಂಪಡಿಸ ಬೇಕು.
16. ಸೇವೆಯು ಸಮರ್ಪಕವಾಗಿ ಇಲ್ಲದಿದ್ದಲ್ಲಿ ಯಾವುದೇ ಮುನ್ಸೂಚನೆ ಇಲ್ಲದೆ ಗುತ್ತಿಗೆಯನ್ನು ರದ್ದು ಪಡಿಸಬಹುದು.

ಪ್ರತಿ ತಿಂಗಳ ಸಮರ್ಪಕ ಸೇವೆಯ ನಂತರ ಉಪವ್ಯವಸ್ಥಾಪಕರು(ಗು.ನಿ) ಶಿವಮೊಗ್ಗ ಡೇರಿ, ವ್ಯವಸ್ಥಾಪಕರು ದಾವಣಗೆರೆ ಡೇರಿ ಮತ್ತು ಎಲ್ಲಾ ಶೀಥಲೀಕರಣ ಕೇಂದ್ರಗಳ ಮೇಲ್ವಿಚಾರಕರಿಂದ ದೃಡಿಕರಿಸಿಕೊಂಡು **ವ್ಯವಸ್ಥಾಪಕ ನಿರ್ದೇಶಕರು, ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಹಾಲು ಒಕ್ಕೂಟ** ಇವರ ಹೆಸರಿಗೆ ಪಾವತಿಗಾಗಿ ದ್ವಿಪ್ರತಿಯಲ್ಲಿ ಬಿಲ್ಲನ್ನು ಸಲ್ಲಿಸತಕ್ಕದ್ದು.

ಯಾವುದೇ ಕಾರಣ ನೀಡದೆ ಟೆಂಡರನ್ನು ಅಂಗಿಕರಿಸುವ /ತಿರಸ್ಕರಿಸುವ ಹಕ್ಕನ್ನು ವ್ಯವಸ್ಥಾಪಕ ನಿರ್ದೇಶಕರು ಹೊಂದಿರುತ್ತಾರೆ. ವ್ಯವಸ್ಥಾಪಕ ನಿರ್ದೇಶಕರ ತೀರ್ಮಾನವೆ ಅಂತಿಮವಾದುದು.

**ಹೆಚ್ಚಿನ ಮಾಹಿತಿಗಾಗಿ ಕಚೇರಿ ವೇಳೆಯಲ್ಲಿ ಗುಣನಿಯಂತ್ರಣ ವಿಭಾಗವನ್ನು ಮತ್ತು ಒಕ್ಕೂಟದ ವೆಬ್‌ಸೈಟ್ – www.shimul.coop ಸಂಪರ್ಕಿಸಬಹುದು.**

**ವ್ಯವಸ್ಥಾಪಕ ನಿರ್ದೇಶಕರು**
ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ
ಜಿಲ್ಲಾ ಸಹಕಾರ ಹಾಲು ಒಕ್ಕೂಟ

ದಿನಾಂಕ: 06/07/2015
ಸ್ಥಳ: ಶಿವಮೊಗ್ಗ

**ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟನಿ.,**
**ಮಾಚೇನಹಳ್ಳಿ, ನಿದಿಗೆ (ಅಂಚೆ), ಶಿವಮೊಗ್ಗ– 577 222, ☎08182–246161, 246463**
**md_shimul@yahoo.com**

## ಕಮರ್ಷಿಯಲ್ ಟೆಂಡರ್ ಫಾರಂ

| ಕ್ರ.ಸಂ | ಕೆಲಸದ ವಿವರಗಳು | ಡೇರಿ /ಶೀತಲೀಕರಣ ಕೇಂದ್ರಗಳು | ಮಾಸಿಕ ಕನಿಷ್ಟ ಭೇಟಿಗಳು | ನಮೂದಿಸಿದ ದರ ರೂ |
|---|---|---|---|---|
| 1 | ಜಿರಲೆ, ಇಲಿ/ಹೆಗ್ಗಣ, ಹಲ್ಲಿ,ನೊಣಗಳ ನಿಯಂತ್ರಣ ಕ್ರಮ | a)**ಶಿವಮೊಗ್ಗ ಕೇಂದ್ರ** ಡೇರಿಯಎಲ್ಲಾ ವಿಭಾಗಗಳು, ಮುಖ್ಯವಾಗಿ ಸಂಸ್ಕರಣ ವಿಭಾಗ, ಉತ್ಪನ್ನ ವಿಭಾಗ, ಡೇರಿಯ ಹೊರ ಆವರಣ, ಪ್ರೀಪ್ಯಾಕ್ ವಿಭಾಗ, ಕೋಲ್ಡ್ ಸ್ಟೋರ್, ಡೀಪ್ ಫ್ರೀಸರ್, ಉಗ್ರಾಣ ವಿಭಾಗಗಳು, ಕಛೇರಿ ವಿಭಾಗ, ಕ್ಯಾಂಟಿನ್ ಮುಂತಾದವುಗಳು | ವಾರಕೊಮ್ಮೆಯಂತೆ ಕನಿಷ್ಟ ನಾಲ್ಕು ಬಾರಿ | |
| 2 | ಜಿರಲೆ, ಇಲಿ/ಹೆಗ್ಗಣ, ಹಲ್ಲಿ,ನೊಣಗಳ ನಿಯಂತ್ರಣ ಕ್ರಮ | b)**ದಾವಣಗೆರೆ ಡೇರಿ**ಯ ಸಂಸ್ಕರಣ ವಿಭಾಗ, ಡೇರಿಯ ಹೊರ ಆವರಣ, ಪ್ರೀಪ್ಯಾಕ್ ವಿಭಾಗ, ಕೋಲ್ಡ್ ಸ್ಟೋರ್, ಉಗ್ರಾಣ ವಿಭಾಗ, ಕಛೇರಿ ವಿಭಾಗ, ಕ್ಯಾಂಟಿನ್ ವಿಭಾಗ ಮತ್ತು ಇತರೆ. | ವಾರಕೊಮ್ಮೆಯಂತೆ ಕನಿಷ್ಟ ನಾಲ್ಕು ಬಾರಿ | |
| 3 | ಜಿರಲೆ, ಇಲಿ/ಹೆಗ್ಗಣ, ಹಲ್ಲಿ,ನೊಣಗಳ ನಿಯಂತ್ರಣ ಕ್ರಮ | c)**ಶೀತಲೀಕರಣ ಕೇಂದ್ರಗಳು:** ಚಿತ್ರದುರ್ಗ ಜಿಲ್ಲೆಯಚಿತ್ರದುರ್ಗ ತಾಲ್ಲುಕಿನ ಚಿತ್ರದುರ್ಗ ಶೀಥಲೀಕರಣ ಕೇಂದ್ರ,ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲುಕಿನ ತಡಗಣಿ ಶೀಥಲೀಕರಣ ಕೇಂದ್ರ, ಚಿತ್ರದುರ್ಗ ಜಿಲ್ಲೆಯ ಮೊಣಕಾಲ್ಮುರು ತಾಲ್ಲುಕಿನ ಬಿ.ಜಿ.ಕೆರೆ ಶೀಥಲೀಕರಣ ಕೇಂದ್ರ, ದಾವಣಗೆರೆ ಜಿಲ್ಲೆಯ ಹೊನ್ನಾಳಿ ತಾಲ್ಲುಕಿನ ಹೊನ್ನಾಳಿ ಶೀಥಲೀಕರಣ ಕೇಂದ್ರ, ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲುಕಿನ ಆನಂದಪುರ ಶೀಥಲೀಕರಣ ಕೇಂದ್ರ, ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲ್ಲುಕಿನ ಹೊಸದುರ್ಗ ಶೀಥಲೀಕರಣ ಕೇಂದ್ರಗಳ ಹಾಲು ಸ್ವೀಕರಣಾ ವಿಭಾಗ, ಪ್ರಯೋಗ ಶಾಲೆ, ಡೇರಿಯ ಹೊರ ಆವರಣ, ಉಗ್ರಾಣ ವಿಭಾಗ, ಕಛೇರಿ ವಿಭಾಗ ಇತ್ಯಾದಿ. | ಪ್ರತಿ ಶೀತಲೀಕರಣ ಕೇಂದ್ರಕ್ಕೆ ಹದಿನೈದು ದಿನಕೊಮ್ಮೆಯಂತೆ ಎರಡು ಬಾರಿ | |

ಎಲ್ಲಾ ಷರತ್ತು ಮತ್ತು ನಿಬಂಧನೆಗಳನ್ನು ಓದಿ ಒಪ್ಪಿರುತ್ತೇನೆ. ಮೇಲೆ ನಮೂದಿಸಿರುವ ದರಗಳು ಎಲ್ಲಾ ತೆರಿಗೆಗಳನ್ನು ಒಳಗೊಂಡಿರುತ್ತದೆ.

**ದಿನಾಂಕ:** ಕಂಪನಿ ಸೀಲ್

**ಸ್ಥಳ:** ಸಹಿ